ಸಂಸಾರವನ್ನು, ಪುರುಷ ಸರ್ವಾಧಿಕಾರವನ್ನು ಧಿಕ್ಕರಿಸಿ ನಿಲ್ಲುವ ಹೆಣ್ಣುಮಕ್ಕಳಿಗೆ ಏನು ಮಾಡಬಾರದು ಎಂಬುದಕ್ಕೆ ಪಾಠವಾಗಿ ನನ್ನ ಬದುಕು ಇತ್ತು ಎಂಬಂತೆ ಬಿಂಬಿಸುತ್ತಾರೆ.. ನನ್ನಂಥವರಿಗೆ ಸಹಾಯವಾಗಿ ಬರುವ ವಿಶ್ವಾಸ ಅಂತಹವರನ್ನು ಅಪರಾಧಿಗಳಂತೆ ಬಿಂಬಿಸುತ್ತಾರೆ. ಶಿಕ್ಷೆಯಾಗುವಂತೆ ನೋಡಿಕೊಳ್ಳುತ್ತಾರೆ.

ಇವರೇ ಸರಿ... ಇವರದೇ ನ್ಯಾಯ... ಕೊಲೆ ಮಾಡಿಯೂ ಜನರ ಕರುಣೆಗೆ ಪಾತ್ರರಾಗುತ್ತಾರೆ. ಹೀಗೆ... ಸಾವನಪ್ಪಿದ ನನ್ನ ಬದುಕು.. ನಿಗೂಢವಾಗಿಯೇ ಉಳಿಯುತ್ತದೆ. ಬದುಕು ನಿಗೂಢವಾಗಿಯೇ ಇರಲಿ... ನಾನು ಮಾಡಿದ್ದು, ಬದುಕಿದ್ದು, ಮನೆ ಬಿಟ್ಟು ಬಂದಿದ್ದು ತಪ್ಪು ಎನ್ನುವುದಾದರೆ... ಇರಲಿ... ಹೊರೆ ಹೊರುತ್ತೇನೆ... ದೇವರ ಮುಂದೆ ನಿಂತು ಎಳೆ ಎಳೆಯಾಗಿ ಬಿಡಿಸಿಡುತ್ತೇನೆ. ಆದರೆ ಸಾವು ನಿಗೂಢವಾಗುವುದು ಬೇಡ... ಸಾವಿಗೆ ನೂಕುತ್ತಿರುವ ಇವರಿಗೆ ಶಿಕ್ಷೆಯಾಗಬೇಕು...ಇವರಿಗೆ ಶಿಕ್ಷೆಯಾದರೆ ವಿಶ್ವಾಸ್ ನ ಮೇಲೆ ಅಪವಾದ ಬರುವುದಿಲ್ಲ... ಇವರ ಕಬಂಧ ಬಾಹುಗಳಿಂದ ಅವನನ್ನು ಮುಕ್ತಗೊಳಿಸಬೇಕು.

ಇವರು ಹೇಳುವಂತೆ ಇದು ಆತ್ಮಹತ್ಯೆ ಅಲ್ಲ... ಇವರೇ ಮಾಡಿರುವ ಕೊಲೆ ಎಂದು ಸಾಬೀತಾಗಬೇಕು. ಯಾರಾದರೂ ನಿಷ್ಠಾವಂತ ಪೊಲೀಸರು ಈ ಕೇಸನ್ನು, ಆತ್ಮಹತ್ಯೆ ಎಂದು ಇವರು ಬಿಂಬಿಸುವ ನನ್ನ ಕೊಲೆಯ ಕೇಸನ್ನು ಕೈಗೆತ್ತಿಕೊಂಡು ವಿಚಾರಣೆ ಮಾಡಿದರೆ ಅವರಿಗೆ ಸಾಕ್ಷಿಗಳು ಸಿಗಬೇಕು.

ಕುತ್ತಿಗೆಯ ಸುತ್ತ ಅವರ ಹಿಡಿತ ಬಿಗಿಯಾಗುತ್ತಿದೆ. ಉಸಿರು... ಉಸಿರಾಡುವುದು ಕಷ್ಟವಾಗುತ್ತಿದೆ. ಕಣ್ಣು ಮೆಲ್ಲನೆ ತೆರೆದು ಅವರತ್ತ ನೋಡಿದೆ. ಹುಚ್ಚು ಆವೇಶದಿಂದ ಕೆಂಪಡರಿತ್ತು ಅವರ ಕಂಗಳು. ಕೊಂಚ ಕಂಗಳನ್ನು ಹೊರಳಿಸಿದೆ. ರಂಗಸ್ವಾಮಿ!.. ಸ್ವಾರ್ಥಿ ರಂಗಸ್ವಾಮಿ! ನನ್ನ ಕಂಗಳಲ್ಲಿ ತುಂಬಿದ್ದ ನೀರು ಹರಿದು... ನನ್ನ ಕೂದಲನ್ನು ಸೇರಿತು. ಅವನ ಕಂಗಳು.... ಅವನ ಕಂಗಳಲ್ಲಿ ಕಂಬನಿಯೇ? ರಂಗಸ್ವಾಮಿ ಅಳುತ್ತಿರುವನೇ? ಅವನ ಕೈಗಳಲ್ಲಿ ನನ್ನ ಮೊಬೈಲ್! ಮೆಸೇಜ್ ಕಳುಹಿಸಬಹುದು ಅವನು.... ಪ್ರೀತಿಗೆ... ವಿಶ್ವಾಸ್ ಗೆ... ಏನು ಮಾಡುತ್ತಿದ್ದಾನೆ?... ನನ್ನ ಕೊಲೆಯನ್ನು ಚಿತ್ರಿಸುತ್ತಿದ್ದಾನೆಯೇ? ಇವರನ್ನು ವಿರೋಧಿಸಲಾರದೆ... ನನ್ನ ಬೆಂಬಲಕ್ಕೆ ಬರದೆ.. ಅಸಹಾಯಕತೆಯಿಂದ ನಿಂತಿರುವ ಇವನು... ನಾಳೆ ಅವನ ಸ್ವಾರ್ಥಕ್ಕಾಗಿಯಾದರೂ ಈ ಕೊಲೆಯ ವಿಡಿಯೋವನ್ನು ಪೊಲೀಸರಿಗೆ ಕೊಡುತ್ತಾನೆಯೇ?.. ಮೊಬೈಲನ್ನು ಹಿಡಿದ ಹಾಗೆಯೇ ಕೈ ಮುಗಿದ ರಂಗಸ್ವಾಮಿ.. ಕ್ಷಮೆ ಕೇಳುತ್ತಿದ್ದಾನೆಯೇ? ಅವನ ಕಂಗಳಲ್ಲಿ ಕಂಬನಿ ಇರುವುದು ನಿಜವೇ? ನನ್ನ ಸಾವು ಅವನನ್ನು ಬದಲಿಸುತ್ತದೆಯೇ?

ನನ್ನ ಸಾವು ಆತ್ಮಹತ್ಯೆಯಲ್ಲ.... ಕೊಲೆ... ವಿಕ್ರಂ ಹಳ್ಳಿಮನೆ ಮಾಡಿರುವ ಕೊಲೆ ಎಂದು ಸಾಬೀತು ಆಗಬೇಕು. ಕಣ್ಣು ಮುಚ್ಚಿಕೊಂಡೆ.

ರಂಗಸ್ವಾಮಿ ಈ ವಿಡಿಯೊ ಕೊಡದಿದ್ದರೂ, ಇದು ಕೊಲೆ ಎಂಬ ಕುರುಹು ಪೊಲೀಸರಿಗೆ ಸಿಗಲಿ.. ಕುರುಹು! ಓದಿದ್ದ ಪತ್ತೇದಾರಿ ಕಾದಂಬರಿಗಳನ್ನು ನೆನೆಸಿಕೊಳ್ಳುತ್ತಾ, ನನ್ನ ಶಕ್ತಿಯನ್ನೆಲ್ಲಾ ಕ್ರೋಡೀಕರಿಸಿ, ನನ್ನ ಕೈಗಳನ್ನು ಎತ್ತಿ ನನ್ನ ಬೆರಳಿನ ಉಗುರುಗಳಿಂದ ಅವರ ಕೈಯನ್ನು ಬಲವಾಗಿ ಪರಚಿದೆ. ರಕ್ತ ಹರಿಯಬೇಕು. ಅವರ ರಕ್ತ ನನ್ನ ಬೆರಳುಗಳ ಮೇಲೆ ಕಲೆಯುಳಿಸಬೇಕು... ಅವರ ಚರ್ಮ.. ನನ್ನ ಉಗುರುಗಳ ಸಂದಿಯಲ್ಲಿ ಸಿಕ್ಕಬೇಕು...

'ಯೂ, ಬಿಚ್!' ಎಂದು ಬೈದರೂ, ಅವರು ಹಿಡಿತ ಸಡಿಲಿಸಲಿಲ್ಲ.... ಬಿಗಿತ ನನ್ನ ಉಸಿರುಗಟ್ಟಿಸಿತು.

ನಾನು ಕೇಳಿದ ಕಡೆಯ ಪದ 'ಯೂ, ಬಿಚ್'.

(ಮುಗಿಯಿತು)



**ಡಾ.ಜಿ. ಕೃಷ್ಣಪ್ಪ**
**ಅವರ**
# ಹೊಸ ಧಾರಾವಾಹಿ ಮುಂದಿನವಾರ ಆರಂಭ




ಸ್ವಯಂವರದಲ್ಲಿ ದಮಯಂತಿ ನಳನನ್ನು ಆಯ್ಕೆ ಮಾಡಿ ಮದುವೆಯಾಗುವುದಾಗಿ ಹೇಳಿದಾಗ ನಿಷಧ ಮಹಾರಾಜನ ಪುತ್ರ ನಳನೊಂದಿಗೆ ಅದ್ದೂರಿಯಾಗಿ ಮದುವೆ ಏರ್ಪಡಿಸಲಾಗುತ್ತದೆ. ನಳ–ದಮಯಂತಿಯರ ಹಾಲು ಜೇನಿನಂತಹ ಸಂಸಾರದ ಪ್ರಣಯ ಪ್ರಸಂಗಗಳ ಕುತೂಹಲಕರ ಪ್ರೇಮ ಕಥಾನಕ ಅತ್ಯದ್ಭುತ ವರ್ಣನೆಗಳೊಂದಿಗೆ...